# ಮಳೆರಾಯ ಮತ್ತು ಶ್ರೀವಿದ್ಯಾಮಾನ್ಯತೀರ್ಥರು :

೧. **ಮಳೆ ತರಿಸಿದ ವಿದ್ಯಾಮಾನ್ಯರು** - 1940ರಲ್ಲಿ ಶ್ರೀಗಳು ಗಯಾಕ್ಷೇತ್ರದಲ್ಲಿ ಚಾತುರ್ಮಾಸ್ಯ ಆಚರಿಸುತ್ತಿದ್ದರು. ಆ ಸಂದರ್ಭದಲ್ಲಿ ಓರ್ವ ವಿಧರ್ಮೀಯನು ಪಾದರಕ್ಷೆಗಳನ್ನು ಧರಿಸಿಯೇ ದೇವಸ್ಥಾನವನ್ನು ಪ್ರವೇಶಿಸಿದನು. ಆಗ ವಿಷ್ಣುಪಾದದ ಅರ್ಚಕರಾದ ಗಯಾವಾಡರು ದೇವಸ್ಥಾನದ ಅಶುಚಿಯ ಬಗ್ಯೆ ಚಿಂತಿತರಾದರು. ಅದರ ಪರಿಹಾರಕ್ಕಾಗಿ ಅವರು ಹಿರಿಯ ವಿದ್ವಾಂಸರಾಗಿದ್ದ ಗಯಾವಾಸಿಗಳಾಗಿದ್ದ ಶ್ರೀ ವರಖೇಡಿ ಪ್ರದ್ಯುಮ್ನಾಚಾರ್ಯರನ್ನು ಕೇಳಿದರು. ಆಗ ಆಚಾರ್ಯರು ಶ್ರೀ ಭಂಡಾರಕೇರಿ ಶ್ರೀಪಾದರ ಬಳಿ ಬಂದರು. ಆಗ ಶ್ರೀಗಳು "ಪವಮಾನ ಸೂಕ್ತ ಅಭಿಷೇಕ, ಹೋಮ, ಬ್ರಾಹ್ಮಣಸಂತರ್ಪಣೆಗಳು ನಡೆಯಬೇಕು. ಇದರಿಂದ ಶುದ್ಧಿಯಾಗುವುದೆಂದರು. ಅದರಂತೆ ವೇದಜ್ಞರಾದ ಬ್ರಾಹ್ಮಣರ ಪವಮಾನ ಸೂಕ್ತಪಾರಾಯಣದ ಘೋಷದೊಂದಿಗೆ ಶ್ರೀಪಾದರು ವಿಷ್ಣುಪಾದಕ್ಕೆ ಸ್ವತ: ತಾವೇ ಅಭಿಷೇಕ ಮಾಡಿದರು. ಈ ಸಮಯದಲ್ಲಿ ಮೂರು ಸಾವಿರಕ್ಕೂ ಹೆಚ್ಚು ಬ್ರಾಹ್ಮಣ–ಸುವಾಸಿನಿಯರು ಉಚ್ಚ ಮಧುರ ಕಂಠದಿಂದ ಹರಿನಾಮ ಸಂಕೀರ್ತನೆಗಳನ್ನು ನಡೆಸುತ್ತಿದ್ದರು. ಈ ಎಲ್ಲಾ ಕಾರ್ಯಕ್ರಮಗಳು ಆರಂಭವಾದೊಡನೆ "ವಿಷ್ಣುಪಾದ" ಎಂಬ ಹೆಸರುಳ್ಳ ಆಕಾಶದಿಂದಲೂ ಭೂಮಿಯ ಮೇಲೆ ಧಾರಾಕಾರವಾಗಿ ಮಳೆ ಆರಂಭವಾಯಿತು. ಅನೇಕ ವರ್ಷಗಳಿಂದ ಮಳೆಯನ್ನೇ ಕಾಣದ ಆ ಗಯೆಯ ಜನರು ಈ ಮಳೆಯನ್ನು ಕಂಡು ಅತ್ಯಂತ ಹರ್ಷಿತರಾದರು. ಎಂದೂ ತುಂಬದ "ಫಲ್ಗು" ನದಿ ತುಂಬಿ ಹರಿಯಿತು. ಜನರೆಲ್ಲ ಶ್ರೀಗಳಿಗೆ ಜಯಕಾರ ಹಾಕಿದಾಗ, ಶ್ರೀಗಳು "ಇದೆಲ್ಲವೂ ಭಗವಂತನ ಅನುಗ್ರಹ. ಆದ್ದರಿಂದ ಅವನನ್ನೇ ಭಜಿಸಿರಿ" ಎಂದರು.

೨. 1998ರಲ್ಲಿ ಶ್ರೀ ವಿದ್ಯಾಮಾನ್ಯರು ಪ್ರಯಾಗದಲ್ಲಿ ಮಾಧ್ವರಾದ್ಧಾಂತ ಸಂವರ್ಧಕ ಸಭೆಯನ್ನು ಹಾಗೂ ಮಧ್ವನವಮಿಯನ್ನೂ ಆಚರಿಸಿದರು. ಈ ಸಂದರ್ಭದಲ್ಲಿ ಅನೇಕ ಪೀಠಾಧಿಪತಿಗಳೂ, ಅನೇಕ ಮತತ್ರಯಪಂಡಿತರೂ ಬಂದಿದ್ದರು. ಕೊನೆಯ ದಿನದಂದು ಗಜರಾಜಗಳ ಮೇಲೆ ರಜತ ಅಂಬಾರಿಯನ್ನಿಟ್ಟು ಅದರ ಮೇಲೆ ಶ್ರೀಮದಾಚಾರ್ಯರ ಭಾವಚಿತ್ರ, ಸರ್ವಮುಲ ಗ್ರಂಥಗಳನ್ನಿಟ್ಟು ಹಾಗೂ ಶ್ರೀಪಾದರನ್ನು ಕುಳ್ಳಿರಿಸಿ ಭವ್ಯ ಮೆರವಣಿಗೆಯನ್ನು ಮಾಡುವ ಉದ್ದೇಶದಿಂದ ಸಿದ್ಧತೆ ಭರದಿಂದ ನಡೆದಿತ್ತು. ಆದರೆ ಆಕಾಶದಲ್ಲಿ ಕಪ್ಪಾದ ಮೋಡ ಕವಿದಿತ್ತು. ಮಳೆ ವ್ಯವಸ್ಥಾಪಕರನ್ನು ಹೆದರಿಸಿತು. ಆಗ ವ್ಯವಸ್ಥಾಪಕರೆಲ್ಲ ಶ್ರೀಗಳನ್ನು ಭೇಟಿ ಆಗಿ ಭಿನ್ನವಿಸಿದರು. ಶ್ರೀಗಳು "ಶ್ರೀಮದಾಚಾರ್ಯರ ಮೆರವಣಿಗೆಗೆ ಮಳೆ ಅಡ್ಡಿಯಾಗುವುದಿಲ್ಲ, ಮೆರವಣಿಗೆ ಆರಂಭವಾಗಲಿ" ಎಂದರು. ಅದರಂತೆ

ಶೋಭಾಯಾತ್ರೆ ಜರುಗಿತು. ಮೆರವಣಿಗೆ ಮುಗಿದು ಸಭಾಮಂದಿರವನ್ನು ಪ್ರವೇಶಿಸಿದ ಕೂಡಲೆ ಮಳೆ ಮತ್ತೆ ಹರಿಯಿತು. "ಮಳೆ ಮೆರವಣಿಗೆಗೆ ತೊಂದರೆ ಕೊಡುವುದಿಲ್ಲ" ಎಂಬ ಶ್ರೀಪಾದರ ಮಾತು ನಿಜವಾಯಿತು.

೩. 1962ರಲ್ಲಿ ಅಷ್ಟಗ್ರಹಯೋಗ ಪ್ರಯುಕ್ತ ದೆಹಲಿಯಲ್ಲಿ ವಿಶ್ವ ಕಲ್ಯಾಣಯಾಗವನ್ನು ೧೭ನೇ ಡಿಸಂಬರದಂದು ಏರ್ಪಡಿಸಲಾಗಿತ್ತು. ಆದರೆ ಹದಿನೇಳರ ಮುಂಚೆಯೇ ಆಗಸದಲ್ಲಿ ಮೇಘಗಳ ಗುಂಪು ನೆಲೆಮಾಡಿತ್ತು. ಮಳೆ ಸುರಿಯುತ್ತಿತ್ತು. ಸಂಘಟಲರ ಚಿಂತೆಗೆ ಅಂತ್ಯಕಾಣದಾಯಿತು. ಲಕ್ಷಾಂತರ ರೂಗಳ ವೆಚ್ಚದಲಿ ನಿರ್ಮಿಸಿದ ಯಾಗದ ಸಿದ್ಧತೆ ಈ ಮಳೆಯಿಂದಾಗಿ ನೀರು ಪಾಲಾದೀತೆಂಬ ಭಯ. ಶ್ರೀಗಳನ್ನು ಸಂಘಟಕರು ಭೇಟಿ ಮಾಡಿ ಭಿನ್ನವಿಸಿಗೊಂಡಾಗ, ಶ್ರೀಗಳು "ಡಿಸೆಂಬರ್ ೧೭ರಂದು ಮಳೆಯಾಗುವುದಿಲ್ಲ, ಯಾಗವು ನಿರ್ವಿಘ್ನವಾಗಿ ನೆರವೇರುವುದು, ಯಾರೂ ಚಿಂತಿಸುವುದು ಬೇಡ" ವೆಂದರು ಅದರಂತೆ ಆಕಾಶದಲ್ಲಿ ಕವಿದಿದ್ದ ಕಪ್ಪು ಮೋಡಗಳು ಡಿಸೆಂಬರ್ ೧೭ರಂದು ಕಾಣದಾಯಿತು. ಯಾಗ ನಿರ್ವಿಘ್ನವಾಗಿ ನೆರವೇರಿತು. ಯಾಗ ಯಶಸ್ವಿಯಾಗಿ ಮುಗಿದ ಕೂಡಲೇ ಮಳೆರಾಯ ಕಂಡ.

೪. 1987 ಜುಲೈ ೫ರಂದು ಉಡುಪಿಯ ಶ್ರೀಕೃಷ್ಣನಿಗೆ ಕೋಟಿ ರೂಗೂ ಅಧಿಕ ಬೆಲೆಯಾದ ಸುವರ್ಣರಥವನ್ನು ಅರ್ಪಿಸುವ ಅಭೂತಪೂರ್ವ ಸಮಾರಂಭ. ಕರ್ನಾಟಕದಲ್ಲಿಯೇ ಮೊದಲ ಸುವರ್ಣರಥ. ಅದಕ್ಕಾಗಿ ಅನೇಕ ಪೀಠಾಧಿಪತಿಗಳ, ಸರಕಾರ, ಮಂತ್ರಿಗಳ, ಲಕ್ಷಲಕ್ಷ ಸಂಖ್ಯಾಕ ಭಕ್ತರ ಆಗಮನದಿಂದ ಉಡುಪಿ ಜನನಿಬಿಡವಾಗಿತ್ತು. ಸಂಭ್ರಮದಿಂದ ಕೂಡಿತ್ತು. ಆದರೆ ಜೂನ್–ಜುಲೈ ತಿಂಗಳು ಭರ್ತಿ ಮಳೆಗಾಲದ ಕಾಲವಾಗಿತ್ತು. ಆದರೆ ಕಾರ್ಯಕರ್ತರಿಗೆ ಮಳೆಯನ್ನು ಹೇಗೆ ತಪ್ಪಿಸುವುದೆಂಬ ಚಿಂತೆ. ಶಿಷ್ಯರು ಪದೇ ಪದೇ ಶ್ರೀಗಳವರನ್ನು ಪ್ರಾರ್ಥಿಸಿದರು. ಆಗ ಶ್ರೀಗಳು "ಉತ್ಸವ ಪ್ರಾರಂಭವಾಗುವವರೆಗೂ ಮಳೆ ಬರುವುದು. ದೇವರು ಹೊರಗೆ ಬಂದ್ಧ ಕೂಡಲೆ ನಿಲ್ಲುವುದು, ಮತ್ತೆ ತೊಂದರೆಯಾಗುವುದಿಲ್ಲ" ಎಂದರು. ಕೇಳಿದವರು ಇದನ್ನು ನಂಬಲಿಲ್ಲ.

 

ಆದರೆ ಭಗವಂತನು ತನ್ನ ಅಚ್ಚಿನ್ನ ಭಕ್ತನ ಮಾತನ್ನು ಸತ್ಯ ಮಾಡಿಸಿದ. ಜನ ನಂಬುವಂತಾಯಿತು. ಕಾರಣ ಅದು ಪ್ರಾತ:ಕಾಲದಲ್ಲಿ ಬೆಳಿಗ್ಗೆ ಸರಿಯಾಗಿ ೧೦.೩೦ಕ್ಕೆ ಉತ್ಸವ ಪ್ರಾರಂಭವಾಯಿತು. ಅಲ್ಲಿಯವರೆಗೂ ಎಡಬಿಡದೆ ಸುರಿಯುತ್ತಿದ್ದ ಮಳೆ ನಿಂತು, ಶ್ರೀಕೃಷ್ಣ–ಮುಖ್ಯಪ್ರಾಣರು ಹೊರಗೆ ಬಂದರು. ಸುವರ್ಣರಥದಲ್ಲಿ ಶ್ರೀಕೃಷ್ಣನನ್ನು ಕುಳ್ಳಿರಿಸಿ, ಪೂಜಿಸಲಾಯಿತು. ಹಿರಣ್ಮಯರಸ್ಥ ಶ್ರೀಕೃಷ್ಣನನ್ನು ಸೂರ್ಯನೂ ಮೋಡಗಳ ಮರೆಯಿಂದ ಹೊರಗೆ ಬಂದು ವೀಕ್ಷಿಸಿದನು. ರಥೋತ್ಸವ ವೈಭವದಿಂದ ಜರುಗಿತು. ರಥೋತ್ಸವ ಮುಗಿಯುವವರೆಗೂ ಕಾದಿದಂತಿದ್ದ ವರುಣದೇವ ಮತ್ತೆ ಜಲವಿತರಣ ಕಾರ್ಯ ಮುಂದುವರಿಸಿದ್ದ.

**ವಿಶ್ವಕಲ್ಯಾಣ ಯಾಗ – 1962 ಡಿಸೆಂಬರ್ 17** – ದೆಹಲಿ– ಜ್ಯೋತಿಶಾಸ್ತ್ರದ ಪ್ರಕಾರ ಎಂಟು ಗ್ರಹಗಳ ಸಮ್ಮಿಲನದ ದುಷ್ಪರಿಣಾಮವಾಗಿ ಜಗತ್ತಿನಲ್ಲಿ ನಡೆಯಬಹುದಾದ ಅಹಿತಕರ ಘಟನೆಗಳನ್ನು ತಡೆಗಟ್ಟುವುದು, ಜಗತ್ತಿನಲ್ಲಿ ಶಾಂತಿ ನೆಲೆಗೊಳಿಸುವುದಾಗಿತ್ತು. ಈ ಯಾಗಕ್ಕೆ ತಮ್ಮ ತಪಸ್ಸಿನ ಫಲವನ್ನೆಲ್ಲ ಇಟ್ಟು ವ್ಯವಸ್ಥಾಪರ ಮುಂದಾಳತ್ವ ವಹಿಸಿದ್ದವರು ನಮ್ಮ ಶ್ರೀ ವಿದ್ಯಾಮಾನ್ಯತೀರ್ಥರು. ಶ್ರೀಗಳು ಈರೀತಿ ಆದೇಶಿಸಿದ್ದರು " ಅಷ್ಟಗ್ರಹಗಳ ಯೋಗದ ದುಷ್ಪರಿಣಾಮ ನಮ್ಮ ದೇಶಕ್ಕೆ ತಗಲದಿರಲು ಹಾಗೂ ಜಗತ್ತಿಗೆ ಕಲ್ಯಾಣವಾಗಲು ನಾಲ್ಕೂವೇದಗಳ ಪಾರಾಯಣ, ಗಾಯತ್ರೀ ಮಂತ್ರದ ಪುರಶ್ಚರಣ, ಹದಿನೆಂಟು ಪುರಾಣಗಳ ಪಾರಾಯಣ, ರಾಮಯಣ, ಮಹಾಭಾರತಗಳ ಪಾರಾಯಣ, ಪವಮಾನ ಹೋಮ, ಶತಚಂಡಿ ಯಾಗ, ನವಗ್ರಹ ಹೋಮ, ಮೃತ್ಯುಂಜಯ ಹೋಮ, ೧೦೦೮ ಸತ್ಯನಾರಾಯಣ ಪೂಜೆ, ವಿಶೇಷವಾಗಿ ಶ್ರೀಮದಾಚಾರ್ಯರ ಸರ್ವಮೂಲ ಗ್ರಂಥಗಳ ಪಾರಾಯಣ,

ಭಗವದ್ಗೀತಾ ಪ್ರವಚನ, ಪಾರಾಯಣ, ಹರಿನಾಮ ಸಂಕೀರ್ತನ, ನಡೆಸಬೇಕು". ಇದಕ್ಕಾಗಿ ದೆಹಲಿಯ ಸಿರಿವಂತರೂ, ಉನ್ನತ ಅಧಿಕಾರಿಗಳೂ ಸಾಮಾನ್ಯ ಭಕ್ತರೂ ಸೇರಿ ಯಾಗದ ಪೂರ್ವದಲ್ಲಿ "ವಿಶ್ವಕಲ್ಯಾಣಮಹಾಯಗ ಸಮಿತಿ" ರಚಿಸಿದರು. ಯಮುನಾನದಿಯ ತೀರದಲ್ಲಿ ಯಾಗವನ್ನು ನಡೆಸಲಾಯಿತು.

ಶ್ರೀಗಳು ತಮ್ಮ ಪ್ರಿಯ ಶಿಷ್ಯ ಶ್ರೀಪೇಜಾವರರೊಂದಿಗೆ ಆಗಮಿಸಿದರು. ಪ್ರಾತ:ಕಾಲ ಹಾಗೂ ಸಾಯಂಕಾಲ ವಿದ್ವಾಂಸರ ಹಾಗೂ ಶ್ರೀಪಾದರ ಉಪನ್ಯಾಸ, ಪ್ರವಚನ, ವಾಕ್ಯಾರ್ಥ, ವಿವಿಧ ಹೋಮಗಳೂ, ಪಾರಾಯಣಾದಿಗಳೂ, ವಿದ್ವತ್ಸಭೆಗಳು ನಡೆದವು. ಹೀಗೆ ಹತ್ತು ದಿನಗಳ ಕಾಲ ನಡೆಯಿತು.

ಈ ಮಹಾಯಾಗದ ಆರ್ಥಿಕ ಬೆನ್ನಲುಬಾಗಿ ಬಿರ್ಲಾ, ಜಯಪುರಿ ಮುಂತಾದ ಕೋಟ್ಯಾಧೀಶರು ಸೇವೆಗಾಗಿ ಕೈಕಟ್ಟಿ ನಿಂತಿದ್ದರು.

ವಿಶ್ವಕಲ್ಯಾಣ ಮಹಾಯಾಗ ನಗರದ ಎಲ್ಲೆಡೆಗಳಲ್ಲೂ ಸಾತ್ವಿಕ ಶಬ್ದ ತರಂಗಿಣಿಯು ರಮಿಸುತ್ತಿತ್ತು. ಒಂದೆಡೆ ವೇದಘೋಷ, ಮತ್ತೊಂದೆಡೆ ಶಾಸ್ತ್ರೀಯ ವಿಚಾರಗಳ ಶಬ್ಧ ಸಂಘರ್ಷ, ಸಂಗೀತಮಯ ಸಂಕೀರ್ತನ, ಹೀಗೆ ಎಲ್ಲೆಲ್ಲೂ "ಶಬ್ದ ಶಬ್ದ ಶಬ್ದ" ಇಂತಹ ಪವಿತ್ರ ಶಬ್ದದಿಂದ ಪಾವನ ಹವನಗಳ ಧೂಮದಿಂದ ಅನೇಕ ಭಕ್ತರ ಮಹಾತ್ಮರ ಪಾದರಜೋಕಣಗಳಿಂದ ಕುದಿಯಾಘಾಟ್ ಮೈದಾನವಾಗಿತ್ತು ಉತ್ತಮ ಪಾವಿತ್ರ್ಯದ ತಾಣ. ಆ ಮಹಾಯಾಗದ ಸಂದರ್ಭದಲ್ಲಿ ಭಾರತದ ರಾಷ್ಟ್ರಾಧ್ಯಕ್ಷರೂ, ಪ್ರಧಾನಮಂತ್ರಿಗಳೂ, ಉಳಿದ ಮಂತ್ರಿಗಳೂ, ಅನೇಕ ಮಹನೀಯರೂ ಭಾಗವಹಿಸಿದ್ದರು.

**ಸಂಗ್ರಹ – ನರಹರಿಸುಮಧ್ವ**

**ಮೂಲ ಲೇಖನ –ಶ್ರೀಕೊರ್ಲಹಳ್ಳಿ ವೇಂಕಟೇಶಾಚಾರ್**